# ಶರಣ್– ತರುಣ್ ಕಾಂಬೊ!



ನಟ ಶರಣ್ ಅವರ ಸಿನಿಮಾಗಳ ಗೆಲುವಿನ ನಾಗಾಲೋಟಕ್ಕೂ, ತರುಣ್ ಸುಧೀರ್ ಅವರಿಗೂ ಅವಿನಾಭಾವ ಸಂಬಂಧವಿದೆ. ಹಾಗೆ ನೋಡಿದರೆ ಶರಣ್ ಅವರ ಯಾವ ಸಿನಿಮಾವನ್ನೂ ತರುಣ್ ನಿರ್ದೇಶನ ಮಾಡಿಲ್ಲ.

ಈ ಕಾಂಬಿನೇಷನ್ ಶುರುವಾಗಿದ್ದು 2012ರ 'ರ‍್ಯಾಂಬೊ' ಸಿನಿಮಾದ ಮೂಲಕ. ಆ ಸಿನಿಮಾದ ನಿರ್ದೇಶಕ ಎಂ.ಎಸ್. ಶ್ರೀನಾಥ್. ನಂತರ ಶರಣ್ ಅವರ ಬಹುತೇಕ ಸಿನಿಮಾಗಳಲ್ಲಿ ತರುಣ್ ಪೆನ್ನು ಕೆಲಸ ಮಾಡಿದೆ. ಕನ್ನಡ ಚಿತ್ರರಂಗಕ್ಕೆ ತುಸು ಹೊಸದು ಎನಿಸುವ ಕ್ರಿಯೇಟಿವ್ ಹೆಡ್ ಎಂಬ ಆಸನವನ್ನೂ ಅವರು ಹಾಕಿಕೊಂಡು ಸೆಟ್‌ನಲ್ಲಿ ಕೂತಿದ್ದಾರೆ. 'ವಿಕ್ಟರಿ', 'ಅಧ್ಯಕ್ಷ', 'ರ‍್ಯಾಂಬೊ 2', 'ವಿಕ್ಟರಿ 2' ಸಿನಿಮಾಗಳಲ್ಲಿಯೂ ಈ ಕಾಂಬಿನೇಷನ್ ಸಖತ್ ವರ್ಕ್ ಆಗಿದೆ.

ಇತ್ತೀಚೆಗೆ ಶರಣ್, ಇನ್ನೂ ಹೆಸರಿಡದ ತಮ್ಮ ಹೊಸ ಸಿನಿಮಾದ ಕುರಿತು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಆ ಸಿನಿಮಾಕ್ಕೆ ಬಂಡವಾಳ ಹೂಡುವುದರ ಜೊತೆಗೆ ಕ್ರಿಯೇಟೀವ್ ಹೆಡ್ ಆಗಿ ತರುಣ್ ಸುಧೀರ್ ಇದ್ದಾರೆ. ಈ ಚಿತ್ರದ ನಿರ್ದೇಶಕ 'ಜಂಟಲ್‌ಮೆನ್' ಖ್ಯಾತಿಯ ಜಡೇಶ್ ಕೆ. ಹಂಪಿ.

ಶರಣ್ ಹಂಚಿಕೊಂಡಿರುವ ಪೋಸ್ಟರ್‌ನಲ್ಲಿ ಚಿತ್ರದ ಶೀರ್ಷಿಕೆ ಇಲ್ಲ. ಬದಲಿಗೆ ಒಂದು ಸೀಟಿಯ ಚಿತ್ರವಿದೆ. ಹಾಗಾಗಿ ಚಿತ್ರದ ಶೀರ್ಷಿಕೆ 'ವಿಷಲ್' ಇರಬಹುದು ಎಂದು ಊಹಿಸಬಹುದು. ಈ ಚಿತ್ರಕ್ಕೆ ನಾಯಕಿ ಯಾರು? ಯಾವಾಗಿನಿಂದ ಚಿತ್ರೀಕರಣ ಶುರು, ಉಳಿದ ತಾರಾಗಣದಲ್ಲಿ ಯಾರಿರುತ್ತಾರೆ ಎಂಬ ಯಾವ ವಿವರಗಳೂ ಇನ್ನೂ ಬಿಟ್ಟುಕೊಟ್ಟಿಲ್ಲ. ಒಟ್ಟಾರೆ ಶರಣ್ ಮತ್ತೆ ತರುಣ್ ಕಾಂಬಿನೇಷನ್‌ನಲ್ಲಿ ತಯಾರಾಗುತ್ತಿರುವ ಸಿನಿಮಾ ಎಂದ ಮೇಲೆ ಭರಪೂರ ಮನರಂಜನೆಗೆ ಯಾವ ಕೊರತೆ ಇರುವುದಿಲ್ಲ ಎಂದಂತೂ ಹೇಳಬಹುದು. ■

# ಥ್ರಿಲ್ಲರ್ ಅಪಾರ್ಟ್‌ಮೆಂಟ್!

ಮಹಾನಗರದ ಅಪಾರ್ಟ್‌ಮೆಂಟ್ ಅಂದರೆ ಅದೊಂದು ಮಿನಿ ವಿಶ್ವ. ಬೇರೆ ಬೇರೆ ಭಾಷೆಯ, ಜಾತಿ, ಧರ್ಮ, ಪ್ರದೇಶಗಳ ಜನರು ಒಂದು ಆವರಣದಲ್ಲಿ ಬದುಕುವ ಜಾಗವದು. ಅಂಥ ಅಪಾರ್ಟ್‌ಮೆಂಟ್ ಗೋಡೆಗಳ ಒಂದೊಂದು ಕಲ್ಲೂ ರೋಚಕ ಕಥೆಯನ್ನು ಹೇಳಬಲ್ಲವು. ಅಂಥದ್ದೇ ಒಂದು ರೋಚಕ ಕಥೆಗೆ ಸಿನಿಮಾ ರೂಪ ಕೊಟ್ಟಿದ್ದಾರೆ ಗುರುರಾಜ ಕುಲಕರ್ಣಿ.



ಗುರುರಾಜ್ ಕುಲಕರ್ಣಿ

'ಅಮೃತ್ ಅಪಾರ್ಟ್‌ಮೆಂಟ್' ಎಂಬ ಹೆಸರಿನ ಈ ಸಿನಿಮಾ ಪೂರ್ಣಗೊಂಡು ಸೆನ್ಸಾರ್ ಅಂಗಳದಲ್ಲಿದೆ.

'ಇದು ಬೆಂಗಳೂರಿನ ಕಥೆ. ನಮ್ಮ ಕಾಲದ ಸಂಕರದ ಕಥೆ. ಮೈಸೂರಿನ ಹುಡುಗ ಮತ್ತು ಕೋಲ್ಕತ್ತದ ಹುಡುಗಿ ಪ್ರೀತಿಸಿ ಮದುವೆಯಾಗುತ್ತಾರೆ. ಅವರಿಬ್ಬರ ಹಿನ್ನೆಲೆ, ಸಂಸ್ಕೃತಿ, ಆಚಾರ ವಿಚಾರಗಳು ಭಿನ್ನ. ಸಹಜವಾಗಿಯೇ ಘರ್ಷಣೆ ಹುಟ್ಟುತ್ತದೆ. ಬೇರಾಗುವ ನಿರ್ಧಾರಕ್ಕೆ ಬರುತ್ತಾರೆ. ಇನ್ನೇನು ಡೈವೋರ್ಸ್ ತೆಗೆದುಕೊಳ್ಳಬೇಕು ಎನ್ನುವಾಗ ಅವರೊಂದು ಚಕ್ರವ್ಯೂಹದಲ್ಲಿ ಸಿಲುಕಿಕೊಳ್ಳುತ್ತಾರೆ. ನಂತರ ಏನಾಗುತ್ತದೆ ಎನ್ನುವುದೇ ಈ ಚಿತ್ರದ ಕಥೆ' ಎಂದು ತಮ್ಮ ಸಿನಿಮಾ ಕಥೆಯ ಬಗ್ಗೆ ಸುಳಿವು ನೀಡುತ್ತಲೇ ಕುತೂಹಲ ಕೆರಳಿಸುತ್ತಾರೆ ಗುರುರಾಜ್. ಸಂಸಾರದಲ್ಲಿನ ಬಿರುಕಿನ ಕಥೆಯ ಜೊತೆಗೆ ಒಂದು ಥ್ರಿಲ್ಲರ್ ಎಳೆಯನ್ನೂ ಹೆಣೆದು ಅವರು ಸಿನಿಮಾ ಕಟ್ಟಿದ್ದಾರೆ.



ತಾರಕ್ ಪೊನ್ನಪ್ಪ ಮತ್ತು ಊರ್ವಶಿ ಗೋವರ್ಧನ್ ನಾಯಕ ನಾಯಕಿಯಾಗಿ ನಟಿಸಿದ್ದಾರೆ. ಬಾಲಾಜಿ ಮನೋಹರ್ ಒಂದು ಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ. ಉಳಿದಂತೆ ಸಂಪತ್ ಕುಮಾರ್, ಮಾನಸಾ ಜೋಷಿ ಮುಖ್ಯಭೂಮಿಯಲ್ಲಿದ್ದಾರೆ. ಬೆಂಗಳೂರನ್ನು ಗೀಗಿ ಪದದ ಮೂಲಕ ಪರಿಚಯಿಸಿರುವುದು ಈ ಚಿತ್ರದ ವಿಶೇಷಗಳಲ್ಲೊಂದು.

'ಚಿತ್ರದ ಬಿಡುಗಡೆಗೆ ಇನ್ನೂ ಸ್ವಲ್ಪ ಕಾಲ ಕಾಯುತ್ತೇನೆ' ಎನ್ನುವ ನಿರ್ದೇಶಕರು ಅದಕ್ಕೆ ಕಾರಣವನ್ನೂ ಹೇಳುತ್ತಾರೆ. 'ಒಂದೆಡೆ ಕೊರೊನಾ. ಇನ್ನೊಂದೆಡೆ ನೆರೆ ಹಾವಳಿ ನಮ್ಮನ್ನು ಕಾಡುತ್ತಿದೆ. ಈ ಸಂಕಷ್ಟದಲ್ಲಿ ನಮ್ಮ ಸಿನಿಮಾ ನೋಡಲು ಬನ್ನಿ ಎಂದು ಜನರನ್ನು ಹೇಗೆ ಕೇಳಿಕೊಳ್ಳಲಿ?' ಎನ್ನುವ ಅವರು ಇನ್ನೊಂದು ತಿಂಗಳು ಬಿಟ್ಟು ಚಿತ್ರಮಂದಿರಗಳಲ್ಲಿಯೇ ಸಿನಿಮಾ ಬಿಡುಗಡೆ ಮಾಡಲು ಯೋಜನೆ ಹಾಕಿಕೊಂಡಿದ್ದಾರೆ. ■